ಶ್ರೀ ಜೆ. ಎಸ್. ದೇಶಮುಖ್.—ಎಲ್ಲೆಲ್ಲಿ ಹಾಗಾಗುತ್ತದೆ ಅಂಥ ಕಡೆ ಗಮನಕೊಟ್ಟು ಅಲ್ಲಿ ಮತ್ತೆ ಆ ಗಿಡಗಳನ್ನು ನೆಡುತ್ತಾರೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ನಿಮ್ಮನ್ನು ಪ್ರಶ್ನೆ ಕೇಳಲು ಅಲೋ ಮಾಡುವುದಿಲ್ಲ. ನಿಮ್ಮ ಪ್ರಶ್ನೆ ಬಂದಾಗ ಕೇಳಿ. ಈಗ ಸಾಧ್ಯವಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ನನ್ನದೊಂದು ಸಣ್ಣ ಪ್ರಶ್ನೆ, ಏನೆಂದರೆ ಇವರು ಏನು ಗಿಡಗಳನ್ನು ಪ್ಲಾಂಟೇಷನ್ ಮಾಡುತ್ತಿದ್ದಾರೆ ಆ ಜಾಗದಲ್ಲೆ ಗಿಡ ಇದ್ದರೂ ಕೂಡ ಮತ್ತೆ ರೀಪ್ಲಾಂಟೇಷನ್ ಮಾಡುತ್ತೇವೆಂದು ಸುಮ್ಮನೆ ಹೇಳಿ ಗಿಡಗಳನ್ನು ಹಾಕಿದ್ದೇವೆಂದು ಹೇಳಿ ಹಣ ಖರ್ಚು ಮಾಡುತ್ತಿದ್ದಾರೆ. ಇಂತಹ ಹಣ ಇಲಾಖಾ ಪತಿಯಿಂದ ಎಷ್ಟು ಖರ್ಚಾಗಿದೆ ಎನ್ನುವುದನ್ನು ತಾವು ಹೇಳುತ್ತೀರಾ ?

ಶ್ರೀ ಜೆ. ಎಸ್. ದೇಶಮುಖ್.—ಅಂಥ ವಿಚಾರ ಇದುವರೆಗೂ ಸರ್ಕಾರದ ಗಮನಕ್ಕೆ ಬಂದಿಲ್ಲ. ತಮಗೆ ಇದರ ಬಗ್ಗೆ ಮಾಹಿತಿ ಇದ್ದರೆ, ಉದಾಹರಣೆ ಕೊಟ್ಟರೆ, ಹೇಳುತ್ತೇನೆ.

ಬೈಂದೂರು ಕ್ಷೇತ್ರದಲ್ಲಿರುವ ನಾವುಂದದಲ್ಲಿ ವಿದ್ಯುಚ್ಛಕ್ತಿ ಉಪಕೇಂದ್ರ ಸ್ಥಾಪನೆ

೭೫೫(ಎ) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರದಿಂದ ಮುರಡೇಶ್ವರದವರೆಗೆ ಈಗ ವಿದ್ಯುಚ್ಛಕ್ತಿ ಉಪ ಕೇಂದ್ರವಿಲ್ಲದೆ ಮಧ್ಯ ಭಾಗದಲ್ಲಿರುವ ಗ್ರಾಹಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬೈಂದೂರು ಕ್ಷೇತ್ರದ ನಾವುಂದ ಎಂಬಲ್ಲಿ ಉಪ ಕೇಂದ್ರದ ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾಪವಿರುವುದು ನಿಜವೇ?

ಇ) ಹಾಗಿದ್ದಲ್ಲಿ ಇದಕ್ಕೆ ಯಾವಾಗ ಮಂಜೂರಾತಿ ನೀಡಿ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್(ವಿದ್ಯುತ್ ಹಾಗೂ ಕೈಗಾರಿಕಾ ಮಂತ್ರಿಗಳು):—

ಅ) ಗಮನಕ್ಕೆ ಬಂದಿದೆ.

ಆ) ಹೌದು.

ಇ) ತಾಂತ್ರಿಕ ಅನುಮೋದನೆಯಾದ ಮೇಲೆ ಸುಮಾರು ಎರಡು ವರ್ಷಗಳು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಹಾಗೆಯೇ (ಇ) ಪ್ರಶ್ನೆಗೆ ಉತ್ತರವಾಗಿ ತಾಂತ್ರಿಕ ಅನುಮೋದನೆಯಾದ ಮೇಲೆ ಸುಮಾರು ಎರಡು ವರ್ಷಗಳು ಎಂದು ಹೇಳಿದ್ದೀರಿ. ಕಾರಣ ಏನು ? ಎಷ್ಟು ವರ್ಷದಲ್ಲಿ ಈ ವಿದ್ಯುಚ್ಛಕ್ತಿ ಉಪಕೇಂದ್ರವನ್ನು ಮುಗಿಸುತ್ತೀರಿ ? ಈ ವಿಚಾರದಲ್ಲಿ ನಾನು ಖಿಖಿಳಿನೇ ನಿಯಮದ ಮೇರೆಗೆ ಒಂದು ಪ್ರಶ್ನೆ ಎತ್ತಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಕುಂದಾಪುರ ತಾಲ್ಲೂಕಿನಲ್ಲಿರುವ ಈ ಬೈಂದೂರು ಕ್ಷೇತ್ರದಲ್ಲಿ ಕರೆಂಟ್ ಸರಿಯಾಗಿ ಇಲ್ಲದೆ ಬಹಳ ಡಿಮ್ ಆಗಿ ಇರುತ್ತದೆ. ವಿದ್ಯುಚ್ಛಕ್ತಿಯನ್ನು ಅಲ್ಲಿ ಸಮರ್ಪಕವಾಗಿ ದೊರಕಿಸುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲದೆ ಅಲ್ಲಿ ರೈತರು ಹಾಕಿರತಕ್ಕಂಥ ಪಂಪ್‌ಸೆಟ್‌ಗಳಿಗೂ ಸಹ ವಿದ್ಯುತ್ ಸರಿಯಾಗಿ ಇಲ್ಲದೆ ಬಹಳ ತೊಂದರೆಯಾಗಿದೆ ಮತ್ತು ಶಿರೂರ್ ಎಂಬ ಗ್ರಾಮದಲ್ಲಿ ಕಳೆದ ೨-೩ ತಿಂಗಳಿಂದಲೂ ಕೂಡ ಕರೆಂಟ್ ಇರುವುದಿಲ್ಲ. ಅದಕ್ಕೋಸ್ಕರವಾಗಿ ನಾನು ಹೇಳುವುದು ಅಲ್ಲಿ ಈ ಬಗ್ಗೆ ಒಂದು ಉಪ ಕೇಂದ್ರ ಸ್ಥಾಪನೆ ಆಗುವುದು ಆಗತ್ಯ ಇದೆ. ಇದರ ಬಗ್ಗೆ ತಾವು ಆಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡು ಆ ಕ್ಷೇತ್ರದ ಜನರಿಗೆ ತೊಂದರೆಯಾಗದೇ ಇರುವ ಹಾಗೆ ಸರ್ಕಾರದವರು ಮಾಡುತ್ತಾರೆಯೇ ? ಇನ್ನು ಎಷ್ಟು ವರ್ಷದಲ್ಲಿ ಈ ಕೆಲಸವನ್ನು ಮುಗಿಸುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಒಂದು ಸಬ್‌ಸ್ಟೇಷನ್ ಮಾಡುವುದೂ ಆಗತ್ಯ ಇದೆ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಆ ಕ್ಷೇತ್ರದಲ್ಲಿ ಆಗುತ್ತಾ ಇರತಕ್ಕಂಥ ತೊಂದರೆಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಗಮನಿಸಿ ಅದರ ಬಗ್ಗೆ ತತ್‌ಕ್ಷಣವಾಗಿ ಎರಡು

ಕೆಲಸಗಳನ್ನು ಕೈಗೊಂಡಿದ್ದಾರೆ. ಮೊದಲನೆಯ ಕೆಲಸ ಬೈಂದೂರ್‌ನಿಂದ ಕುಂದಾಪುರದವರೆಗೆ ಆಧುನಿಕವಾಗಿ ಆಗತಕ್ಕಂಥ ಕಂಡಕ್ಟರ್‌ಸ್ಸನ್ನು, ೧೧ ಕೆ.ವಿ. ಲೈನ್ ಅನ್ನು ಹಾಕುತ್ತಾ ಇದ್ದೇವೆ. ಇನ್ನು ನಾವುಂದ ಎಂಬಲ್ಲಿ ಒಂದು ಸಬ್‌ಸ್ಟೇಷನ್ ಹಾಕಬೇಕು ಎನ್ನುವ ವಿಷಯವನ್ನು ಮುಂದಲಿ ಮುಂದೆ ತಂದಿದ್ದೇವೆ. ಈಗಾಗಲೇ ಅದು ಅಪ್ರೂವಲ್ ಆಗಿ ಅಲ್ಲಿ ಟ್ರಾನ್ಸ್‌ಫಾರ್ಮರ್ ಕೆಲಸ ನಡೆಯುತ್ತಾ ಇದೆ. ಆದರೆ ನಾವುಂದ ಎಂಬಲ್ಲಿ ಒಂದು ಸಬ್‌ಸ್ಟೇಷನ್ ಹಾಕುವ ಕೆಲಸ ಸದ್ಯಕ್ಕೆ ಅದು ಬಗೆಹರಿಯುವುದಿಲ್ಲ ಎಂದು ನಾನೂ ಒಪ್ಪುತ್ತೇನೆ. ಏತಕ್ಕೆಂದರೆ ಅದಕ್ಕೆ ತತ್‌ಕ್ಷಣವಾಗಿ ಇನ್ನೊಂದು ಟ್ರಾನ್ಸ್‌ಫಾರಂ ಹಾಕಿ ಒಂದು ಹೊಸ ಲೈನ್ ಹಾಕಬೇಕಾಗುತ್ತದೆ. ಇನ್ನು ಇದಕ್ಕೆ ತಾಂತ್ರಿಕ ಅನುಮೋದನೆಯಾದ ಮೇಲೆ ಎಷ್ಟು ವರ್ಷದಲ್ಲಿ ಮುಗಿಸುತ್ತೀರಾ ಎಂದು ಕೇಳಿದ್ದಾರೆ. ನಮ್ಮ ಕೆಲಸ ಅತಿ ಬೇಗ ಆಗುತ್ತದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಜೆ. ಎಸ್. ಆಚಾರ್.—ತಾವು ಬೈಂದೂರ್‌ನಿಂದ ಕುಂದಾಪುರದವರೆಗೆ ೧೧ ಕೆ.ವಿ. ಲೈನ್ ಅನ್ನು ಹಾಕುತ್ತಾ ಇದ್ದೇವೆ ಎಂದು ಹೇಳಿದಿರಿ. ಬೈಂದೂರು ಭಟ್ಕಳ್ ಮದ್ಯೆ ಶಿರೂರ್ ಗ್ರಾಮದಲ್ಲಿ ೧೦-೧೫ ಸಾವಿರ ಜನಸಂಖ್ಯೆ ಇದೆ. ಆ ಪ್ರದೇಶದ ಜನರಿಗೆ ಕರೆಂಟ್ ಇಲ್ಲದೆ ಬಹಳ ತೊಂದರೆಯಾಗಿದೆ. ಶಿರೂರ್ ಗ್ರಾಮಕ್ಕೆ ವಿದ್ಯುಚ್ಚಕ್ತಿ ಕೊಡುವ ಬಗ್ಗೆ ತಾವು ಗಮನಹರಿಸಬೇಕು ಎಂದು ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ತಾವು ಪರ್ಟಿಕಲರ್ ಹೇಳಿದಂಥ ಶಿರೂರ್ ಗ್ರಾಮದ ಬಗ್ಗೆ ತಮ್ಮಲ್ಲಿ ಏನು ಮಾಹಿತಿ ಇದೆ ಅದನ್ನು ಕೊಡಿ. ಅಲ್ಲಿಯ ಸಿಸ್ಟಂ ಇಂಪ್ರೂವ್‌ಮೆಂಟ್ ಬಗ್ಗೆ ನೋಡಿ ಅಡಿಷನಲ್ ಟ್ರಾನ್‌ಫಾರ್ಮರ್ ಲೈನ್ ಆಗಲಿ ಅಥವಾ ಒಂದು ಹೊಸಲೈನ್ ಹಾಕುವುದಾಗಲಿ ಮಾಡುವುದರ ಬಗ್ಗೆ ನೋಡೋಣ. ಆದರೆ ಅಲ್ಲಿ ಒಂದು ಸಬ್‌ಸ್ಟೇಷನ್ ಮಾಡುವ ಕೆಲಸ ತಕ್ಷಣವಾಗಿ ಆಗುವುದಿಲ್ಲ. ಮುಂದೆ ಮಾಡುತ್ತೇನೆ.

ಪಂಪುಸೆಟ್ಟುಗಳ ವಿದ್ಯುತ್ತೀಕರಣ

೭೪ (೧೩೧) ಶ್ರೀ ವಠಾಲೀಕಯ್ಯ ವಿ. ಗುತ್ತೇದಾರ್ (ಆಫಜಲಪುರ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಚಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗ ಜಿಲ್ಲೆ ಆಫಜಲ್‌ಪುರ ತಾಲ್ಲೂಕಿನಲ್ಲಿ ಎಷ್ಟು ಪಂಪುಸೆಟ್ಟುಗಳು ವಿದ್ಯುತ್ ತಂತಿ ಖಿಳೆಯದೆ ಹಾಗೂ ಟ್ರಾನ್‌ಫಾರ್ಮರ್ (ಟಿ.ಸಿ.) ಅಳವಡಿಸದೆ ಉಳಿದಿವೆ?

ಆ) ಈ ರೀತಿ ಪಂಪ್‌ಸೆಟ್ಟುಗಳನ್ನು ಪಡೆದುಕೊಂಡಿರುವ ಅನೇಕ ರೈತರು ಬ್ಯಾಂಕಿನಿಂದ ಸಾಲ ಪಡೆದು ಇದರ ಲಾಭ ಪಡೆದುಕೊಳ್ಳದೆ ಬ್ಯಾಂಕಿನ ಬಡ್ಡಿ ತುಂಬುತ್ತಿದ್ದಾರೆನ್ನುವುದು ಸರಕಾರದವರಿಗೆ ತಿಳಿದಿದೆಯೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ತುರ್ತುಕ್ರಮ ಕೈಗೊಂಡು ಪಂಪ್‌ಸೆಟ್ಟುಗಳನ್ನು ಬಳಸುವಂತೆ ಮಾಡಲಾಗುವುದೆ?

ಈ) ಇದಕ್ಕೆ ಎಷ್ಟು ಸಮಯ ಬೇಕಾಗುವುದು.

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಮಂತ್ರಿಗಳು).—

ಅ) ೪೫೯ ಪಂಪ್‌ಸೆಟ್ಟುಗಳು.

ಆ) ತಿಳಿದಿಲ್ಲ.

ಇ) ಪಂಪ್‌ಸೆಟ್ಟುಗಳನ್ನು ವಿದ್ಯುದೀಕರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ವರ್ಷದೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಮಾಲೀಕಯ್ಯ ವಿ, ಗುತ್ತೆದಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದರಲ್ಲಿರುವ (ಅ) ಪ್ರಶ್ನೆಗೆ ಉತ್ತರವಾಗಿ ೪೫೦ ಪಂಪ್‌ಸೆಟ್ಟುಗಳು ಎಂದು ಹೇಳಿದ್ದಾರೆ. ಮತ್ತು ಇದರಲ್ಲಿರುವ (ಈ) ಪ್ರಶ್ನೆಗೆ ಉತ್ತರವಾಗಿ ಇದನ್ನು ವರ್ಷದೊಳಗೆ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ರೈತರಿಗೆ ಏನು ತೊಂದರೆಯಾಗಿದೆ ಎಂದರೆ ಅವರು ಈಗಾಗಲೇ ಇದರ ಬಗ್ಗೆ ಬ್ಯಾಂಕಿನಿಂದ ತೆಗೆದುಕೊಂಡಿರತಕ್ಕಂಥ ಸಾಲಕ್ಕೆ ಬಡ್ಡಿ ಕಟ್ಟುತ್ತಿದ್ದಾರೆ. ಆದುದರಿಂದ ತಾವು ಆದಷ್ಟು ಬೇಗನೆ ಈ ವರ್ಷವೇ ಅದಕ್ಕೆ ಬೇಕಾದಂಥ ಮೆಟೀರಿಯಲ್ಸ್ ತರಿಸಿ ಅಲ್ಲಿಗೆ ವಿದ್ಯುತ್ ತಂತಿಯನ್ನು ಎಳೆದು ಅವರ ಪಂಪ್‌ಸೆಟ್ಟುಗಳಿಗೆ ಬೇಗನೆ ವಿದ್ಯುತ್ ದೊರಕಿಸಿಕೊಡಬೇಕು ಎಂದು ನಾನು ಕೇಳುತ್ತೇನೆ.